

ಹುಟ್ಟಿಸಿದ್ದು ಸುಳ್ಳಲ್ಲ. ಪಾಪ ಅದಕ್ಕೋ ಪ್ರಾಣ ಸಂಕಟ.

ಪಾರ್ವಾಲಿ ತಾಯಿ ಹೆಸರು ಪಾರು. ನಾನವಳನ್ನುಈ ಹಿಂದೆ ನೋಡಿದ್ದೇನೆ. ಈಗವಳು ಇಲ್ಲ. ಜಿಮ್ ಕಾರ್ಬೆಟ್ ಕಾಡಿನಲ್ಲಿ ಐಕ್ಯವಾಗಿದ್ದಾಳೆ. ಪಾರ್ವಾಲಿಯ ತಂದೆ ಸಾಂಬಾ. ಮನುಷ್ಯರನ್ನು ಕೊಂದು ಹೆಸರು ಕೆಡಿಸಿಕೊಂಡು ತಾನೂ ಸತ್ತುಹೋದ. ಪಾರ್ವಾಲಿಯ ಜೊತೆಯಿದ್ದ ಪುಷ್ಪ ಎಂಬ ಗಂಡು ಹುಲಿ ಕೂಡ ಆಗಿ ಮ್ಯಾನ್ ಈಟರ್ ಆಗಿ ಈಗ ಜೈಲಲ್ಲಿದ್ದಾನೆ. ಪಾರು ಕುಟುಂಬದ ಹಿರಿಯ ಮಗಳಾದ ಈ ಹೆಣ್ಣು ಹುಲಿಯನ್ನು ನ್ಯಾಚುರಲಿಸ್ಟ್‌ಗಳು ಪಾರ್ವಾಲಿ ಎಂದು ನಾಮಕರಣ ಮಾಡಿದ್ದಾರೆ. ಈಕೆಯ ಉಳಿದಿಬ್ಬರು ತಂಗಿಯರ ಹೆಸರು ಪೇಡ್‌ವಾಲಿ ಮತ್ತು ಗೇಟಿಯಾವಾಲಿ. ಅಚ್ಚರಿ ಎಂದರೆ ಕೊನೆಯ ದಿನ ಕಿನನೋಲಿ ಎಂಬ ಜಾಗದಲ್ಲಿ ಪೇಡ್‌ವಾಲಿ ಅಚಾನಕ್ಕಾಗಿ ಸಿಕ್ಕಳು. ಈಕೆ ಮರದ ಮೇಲೆ ಹತ್ತಿ ಕುಳಿತ ಕಾರಣಕ್ಕೆ ಈ ಹೆಸರು ಬಂದಿದ್ದಂತೆ. ಸಾಧಾರಣವಾಗಿ ಹುಲಿಗಳು ಮರ ಹತ್ತುವುದು ಕಡಿಮೆ. ಆದರೆ ಈ ಗಂಡುಬೀರಿ ಆ ಕೆಲಸವನ್ನೂ ಮಾಡಿ ಪೂರ್ರೈಸಿ ಮರದಾಕೆ ಎಂದು ಕರೆಸಿಕೊಳ್ಳುತ್ತಿದ್ದಾಳೆ. ಬೋನಸ್ ಎಂದರೆ ನಮಗೆ ಪೇಡ್‌ವಾಲಿ ಹಂಟಿಂಗ್ ನಡೆಸುವ ಮೂಡಿನಲ್ಲಿದ್ದಾಗಲೇ ಸಿಕ್ಕಿಬಿದ್ದಳು. ಜಿಂಕೆಗಳ ಹಿಂಡಿನ ಮೇಲೆ ಕಣ್ಣಿಟ್ಟು ನುಗ್ಗಿದ ಅವಳಿಂದ ಹುಲ್ಲೆಗಳ ಗುಂಪು ತಪ್ಪಿಸಿಕೊಂಡವು. ಛಂಗನೆ ನೆಗೆದು ಕಾಡಿನ ಮತ್ತೊಂದು ಬದಿಯಿಂದ ಆಕ್ರಮಣ ಮಾಡಲು ಓಡಿದ ಪೇಡ್‌ವಾಲಿ ಕೈಗೆ ಜಿಂಕೆಗಳು ಸಿಗದಾದವು. ಮೂರು ರಸ್ತೆಗಳು ಕೂಡುವ ಕಿನನೋಲಿ ಈಕೆ ಬೇಟೆ ನಡೆಸುವ ಫೆವರೇಟ್ ಜಾಗವೆಂದು ಡ್ರೈವರ್ ಹೇಳಿದ. ಹಾಗಿದ್ದರೆ ನಾಳೆ ಕೂಡ ಬರೋಣ ಎಂದು ಹೇಳಿದೆ.

‘ನಿನ್ನೆ ಹುಲಿಯ ಆರ್ಭಟಕ್ಕೆ ಚಿರತೆ ಹೆದರಿ ಮರ ಹತ್ತಿ ಕೂತಿದ್ದು ನೋಡಿದ್ರಲ್ಲ. ಆ ಚಿರತೆ ಭೇದಿ ಮಾತ್ರೆ ಕೊಟ್ಟವಳು ಇವಳೇನೇ ಸರ್’ ಎಂದು ನ್ಯಾಚುರಲಿಸ್ಟ್ ವಸೀಂ ನೆನಪಿಸಿದ.

ಕೊನೆಯ ತಂಗಿ ಗೇಟಿಯಾವಾಲಿಳನ್ನು ಅವಳಿಬ್ಬರು ಗಂಡು ಮಕ್ಕಳನ್ನು ಕೊನೆಯ ದಿನ ಹುಡುಕುವ ಸಾಹಸ ಮಾಡಿದೆವು. ಇಡೀ ದಿನ ನಿರಾಸೆ ಬಿಟ್ಟರೆ ಮತ್ತೇನೂ ಸಿಗಲಿಲ್ಲ. ಸುಸ್ತಾಗಿ ಸಂಜೆಯ ಹೊತ್ತು ಮೈನ್ ಹೈ ಬ್ಯಾಂಕ್ ಎಂಬ ಜಾಗಕ್ಕೆ ಹೋದೆವು. ಅಲ್ಲಿ ಟೀ ಕುಡಿಯುತ್ತಾ ಪಕ್ಕದಲ್ಲೇ ಹರಿಯುವ ರಾಮಗಂಗಾ ನದಿಯನ್ನು ನೋಡುತ್ತಾ ನಿಂತಿದ್ದೆವು. ಅಷ್ಟರಲ್ಲಿ ದುರ್ಬೀನಿನಲ್ಲಿ ನದಿ ಗಮನಿಸುತ್ತಿದ್ದ ಒಬ್ಬ ‘ಅಯ್ಯೋ ಅಲ್ಲಿ ನೋಡಿ ಜೋಡಿ ಹುಲಿಗಳು’ ಎಂದು ತಕಪಕ ಕುಣಿಯತೊಡಗಿದ. ‘ಬಿಳಿಗಲ್ಲುಗಳ ನಡುವೆ ದೂರದಲ್ಲಿರುವ ಅವು ಇತ್ತ ಕಡೆಗೇ ಬರುತ್ತಿವೆ ನೋಡಿ’ ಎಂದು ನಮ್ಮ ಕಳವಳ ಹೆಚ್ಚಿಸಿದ. ಕಷ್ಟಬಿದ್ದು ನೋಡಿದಾಗ ಸುಮಾರು ದೂರದಲ್ಲಿದ್ದ ಅವು ಚಿಕ್ಕಚಿತ್ರದಂತೆ ಕಾಣುತ್ತಿದ್ದವು. ‘ಕೊನೆಯ ತಂಗಿ ಗೇಟಿಯಾವಾಲಿ ಮಕ್ಕಳು ಇವು. ಮೊಸಳೆ ಶಿಕಾರಿ ಮಾಡಲು ಬಂದಿದ್ದಾವೆ, ಬೇಗ ಪಟ ತೆಗಿಯಿರಿ ಸರ್’ ಎಂದು ವಸೀಂ ಅವಸರಿಸಿದ. ನನಗೆ ಅವುಗಳ ಚಿತ್ರ ಈಗ ಬೇಡ. ಕೊಂಚ ಹತ್ತಿರ ಬರಲಿ. ಈಗ ಸುಮ್ಮನೆ ನೋಡುತ್ತಾ ಕೂರುತ್ತೇನೆ ಎಂದು ಅವುಗಳ ಆಟ ನೋಡತೊಡಗಿದೆ. ಪ್ರೈಮರಿ ಸ್ಕೂಲು ಮಕ್ಕಳಂತೆ ತುಂಟತನ ಮಾಡುತ್ತಾ, ನದಿಯಲ್ಲಿ ಈಜುತ್ತಾ, ಘಡಿಯಾಲ್ ಮೊಸಳೆಗಳ ಹಿಡಿಯಲೆತ್ನಿಸಿ ಸೋಲುತ್ತಾ ಸಾಕಷ್ಟು ಮನರಂಜನೆ ಕೊಟ್ಟವು. ಒಂದು ಮರಿ ನದಿಯಲ್ಲಿ ತೇಲಿ ಬಂದಿದ್ದ ಬ್ಯಾಗ್ ಒಂದನ್ನು ಕಚ್ಚಿಕೊಂಡು ಸಡಗರದಿಂದ ಓಡತೊಡಗಿತು. ‘ಸುತ್ತ ಇಲ್ಲೇ ಎಲ್ಲೋ ಅವ್ವನೂ ಇರಬಹುದು ನೋಡಿ ಹೋಗೋಣ’ ಎಂದು ಆಸೆ ಪಟ್ಟೆ. ‘ಸಮಯವಾಗುತ್ತಿದೆ. ನಾವಿನ್ನೂ ದೂರ ಹೋಗಬೇಕು. ನಡಿಯಿರಿ ಎಂದು’ ಡ್ರೈವರ್ ಮುಶೀರ್ ಜಿಪ್ಸಿ ಚಾಲೂ ಮಾಡಿದ. ●